ಕರ್ನಾಟಕ ಸರ್ಕಾರ

ದಿನಾಂಕ: 10-07-2017

# ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಮುಖ್ಯಮಂತ್ರಿ ಸಭೆ




ಬೆಂಗಳೂರು, ಜುಲೈ 10

ಅಪರಾಧಗಳ ಸಂಖ್ಯೆಯಲ್ಲಿ ಗಣನೀಯ ಇಳಿಕೆಯಾಗಿದ್ದು, ಸರ್ಕಾರ ಪೊಲೀಸ್ ಇಲಾಖೆಗೆ ಹೆಚ್ಚು ಸವಲತ್ತುಗಳನ್ನು ಒದಗಿಸಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ಅವರು ಇಂದು ಪೊಲೀಸ್ ಮಹಾ ನಿರ್ದೇಶಕರ ಕಚೇರಿಯಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳ ಸಭೆಯ ನಂತರ ಹಮ್ಮಿಕೊಳ್ಳಲಾದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಬೆಂಗಳೂರಿನಲ್ಲಿರುವ ಎಲ್ಲಾ 100 ಪೊಲೀಸ್ ಠಾಣೆಗಳಲ್ಲೂ ಪಿಂಕ್ ಹೊಯ್ಸಳ ವಾಹನವನ್ನು ಒದಗಿಸಲಾಗುವುದು. ಈಗಾಗಲೇ 51 ವಾಹನ ಈ ಕಾರ್ಯ ನಿರ್ವಹಿಸುತ್ತಿವೆ. ಇಲಾಖೆಗೆ ಸಿಬ್ಬಂದಿ, ವಾಹನವನ್ನು ಒದಗಿಸಲು ಸರ್ಕಾರ ಸಿದ್ಧವಿದೆ ಎಂದರು.

ಹೆಣ್ಣು ಮಕ್ಕಳ ದೌರ್ಜನ್ಯ, ಮಾನಹಾನಿ ನಡೆದಲ್ಲಿ ತಕ್ಷಣ ಸಂತ್ರಸ್ತರು 100 ಸಂಖ್ಯೆಗೆ ಕರೆ ಮಾಡಿದರೆ 10 ನಿಮಿಷದೊಳಗಾಗಿ ಪಿಂಕ್ ಹೊಯ್ಸಳ ಅವರ ನೆರವಿಗೆ ಬರುತ್ತದೆ. ಸರಗಳ್ಳತನ, ಒಂಟಿ ಮಹಿಳೆ ಕೊಲೆ ಇತ್ಯಾದಿ ಪ್ರಕರಣಗಳಲ್ಲಿ ಇದು ನೆರವಾಗುತ್ತದೆ. ಒಟ್ಟಾರೆ ಮಹಿಳೆಯರ ರಕ್ಷಣೆ ಸರ್ಕಾರದ ಆದ್ಯ ಕರ್ತವ್ಯಗಳಲ್ಲಿ ಒಂದು ಎಂದರು.

ಇತ್ತೀಚೆಗೆ ಮಂಗಳೂರು ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಡೆದಿರುವ ಅಹಿತಕರ ಘಟನೆಗಳ ಬಗ್ಗೆ ವಿಷಾದ ವ್ಯಕ್ತಪಡಿಸಿದ ಮುಖ್ಯಮಂತ್ರಿಗಳು ಈ ಪ್ರಕರಣಗಳಲ್ಲಿ ಮತೀಯ ಸಂಘಟನೆಗಳ ಪಾತ್ರವಿದೆ. ಇದಕ್ಕೆ ಕಾರಣರಾದವರು ಯಾವುದೇ ಧರ್ಮಕ್ಕೆ ಸೇರಿರಲಿ ಅವರ ಮೇಲೆ ನಿಗಾ ಇಟ್ಟು. ಕೋಕಾ, ಗೂಂಡಾ ಕಾಯ್ದೆಯಡಿ ಕ್ರಮ ತೆಗೆದುಕೊಂಡು ಗಡಿಪಾರು ಮಾಡಬೇಕೆಂದರು.

ಮಂಗಳೂರು, ಉಡುಪಿ ಜಿಲ್ಲೆಗಳು ಶಾಂತಿಗೆ ಹೆಸರಾದವು. ಈ ಶಾಂತಿಯನ್ನು ಭಂಗ ಮಾಡುವ ಪ್ರಯತ್ನಗಳು ನಡೆಯುತ್ತಿವೆ. ಶಾಂತಿ ಕೆಡಿಸಲು ಪ್ರಯತ್ನ ಮಾಡಿದವರಿಗೆ ಸೆಕ್ಷನ್ 144 ಹಾಗೂ 35 ರನ್ವಯ ಕ್ರಮ ಕೈಗೊಳ್ಳಲಾಗುವುದು. ಪೊಲೀಸರು ಸಹ ಕಾನೂನನ್ನು ಕೈಗೆತ್ತಿಕೊಳ್ಳದೆ ಸಂಯಮದಿಂದ ಕೆಲಸ ನಿರ್ವಹಿಸಿ ಜನಸ್ನೇಹಿಯಾಗಬೇಕೆಂದರು.

ಮತೀಯ ಗೂಂಡಾಗಳಿಗೆ, ತಪ್ಪಿತಸ್ಥರಿಗೆ ಕಾನೂನಿನ ಭಯ ಹುಟ್ಟಿಸಬೇಕು. ಈ ಜಿಲ್ಲೆಗಳಿಗೆ ಭೇಟಿ ನೀಡಿ ವರದಿ ನೀಡುವಂತೆ ಹಿರಿಯ ಅಧಿಕಾರಿಗಳಿಗೆ ತಾವು ಸೂಚಿಸಿರುವುದಾಗಿ ತಿಳಿಸಿದರು.

ಮಕ್ಕಳ ಜೊತೆಗೆ ಸಂಭಾಷಣೆ ನಡೆಸಿದ ಸಂದರ್ಭ ನೆನೆದ ಮುಖ್ಯಮಂತ್ರಿಗಳು, ಮಹದೇವಪುರ ಸುತ್ತಮುತ್ತಲು ಮಾದಕ ವಸ್ತುಗಳು ಸಿಗುತ್ತಿದೆ ಎಂಬ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಪೊಲೀಸರ ಸಹಾಯದಿಂದ ಇದಕ್ಕೆ ಕಡಿವಾಣ ಹಾಕಲಾಗಿದೆ ಎಂದರು.

ಈ ಸಂದರ್ಭದಲ್ಲಿ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಾದ ಆರ್. ಕೆ. ದತ್ತಾ, ಗೃಹ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಾದ ಸುಭಾಷ್‌ಚಂದ್ರ, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎಲ್.ಕೆ. ಅತೀಕ್, ಗೃಹ ಸಚಿವರ ಸಲಹೆಗಾರ ಕೆಂಪಯ್ಯ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.

ಎಸ್‌ಎಂ:ಕೆಎನ್‌ಕೆ::ಜಿಪಿಆರ್.

--------------------